## ಕ್ರಿ.ಮಿಸ್. ಸಂಖ್ಯೆಃ 231/2019 ಪಿಡಬ್ಲೂಃ5
## ದಿನಾಂಕ 15-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

## ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ

ಸದ್ರಿ ಸಾಕ್ಷಿ ಮೂಲ ಮದುವೆಯ ನೋಂದಣಿ ಪುಸ್ತಕವನ್ನು ಹಾಜರುಪಡಿಸಿದ್ದು ಅದರ ಜೊತೆ ಅದರ ಕಲರ್ ಪ್ರತಿ ಜೆರಾಕ್ಸನ್ನು ಹಾಜರುಪಡಿಸಿರುತ್ತಾರೆ. ಎರಡೂ ದಾಖಲೆಗಳನ್ನು ತಾಳೆ ಮಾಡಿ ನೋಡಲಾಗಿ ಒಂದಕ್ಕೊಂದು ಸಾಮ್ಯತೆ ಇದ್ದು ಆದರೆ ಕಲರ್ ಜೆರಾಕ್ಸ ಪ್ರತಿಯಲ್ಲಿ ಒಂದು ಮುದ್ರೆ ಮತ್ತು ಅಧ್ಯಕ್ಷರು ಎಂದು ಹೊಸದಾಗಿ ಈಗ ಹಾಕಲಾಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸೀಲನ್ನು ನ್ಯಾಯಾಲಯಕ್ಕೆ ತೋರಿಸಿರುತ್ತಾರೆ ಕಾರಣ ಎರಡೂ ದಾಖಲೆಗಳು ತಾಳೆ ಹೊಂದಿದ್ದರಿಂದ ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

ಅದೇ ರೀತಿ ಸಾಕ್ಷಿ ತಮ್ಮ ಟ್ರಸ್ಟ ನೋಂದಣಿಯಾದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದರೊಂದಿಗೆ ಅಟೆಸ್ಟೆಡ್ ಮಾಡಿದ ಪ್ರತಿಯನ್ನು ಕೂಡ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎರಡೂ ದಾಖಲೆಗಳನ್ನು ಒಂದಕ್ಕೊಂದು ತಾಳೆ ಮಾಡಿ ನೋಡಲಾಗಿ ದಾಖಲೆಗಳು ಮೂಲ ಪ್ರತಿಗಳೊಂದಿಗೆ ತಾಳೆ ಹೊಂದಿದ್ದರಿಂದ ಅಟೆಸ್ಟೆಡ್ ಪ್ರತಿಯನ್ನು ನಿಪಿ-14 ಎಂದು ಗುರುತಿಸಲಾಯಿತು ಮತ್ತು ಮೂಲ ದಾಖಲೆಗಳನ್ನು ಸಾಕ್ಷಿಯ ವಿನಂತಿ ಮೇರೆಗೆ ಹಿಂದಿರುಗಿಸಲಾಯಿತು.

## ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ

ನಿಪಿ-14 ದಾಖಲೆಯಲ್ಲಿ ಮದುವೆಗಳನ್ನು ನೋಂದಣಿ ಮಾಡಿ ಪ್ರಮಾಣ ಪತ್ರ ಕೊಡಲು ಅದರಲ್ಲಿ ತೋರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಧರ್ಮ ಪ್ರಚಾರದ ಹೊರತು ಬೇರೆ ಯಾವುದೇ ರೀತಿಯ ಕಾರ್ಯಗಳಿಗೆ ನಿಪಿ-14 ದಾಖಲೆ ಮಾಡಿಲ್ಲ ಎಂದರೆ ಸರಿ ಅಲ್ಲ. ಮದುವೆ ಮಾಡಲು ಬರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದ್ರಿ ಅರ್ಜಿದಾರರು ಮತ್ತು ಎದುರುದಾರರು ನಮ್ಮ ಮಸೀದಿಯಲ್ಲಿ ಬಂದು ಮದುವೆ ಮಾಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಮ್ಮ ಊರಿನಲ್ಲಿ

ಅಂಜುಮನ್ ಕಮೀಟಿ ಇರುವುದಿಲ್ಲ. ಎದುರುದಾರ ಲಿಖಿತವಾಗಿ ಮದುವೆ ಮಾಡಿಸಿ ಕೊಡಿ ಎಂದು ನನಗೆ ಅರ್ಜಿ ಕೊಟ್ಟಿಲ್ಲ. ಇಲ್ಲಿಯವರೆಗೆ ನಮ್ಮ ಟ್ರಸ್ಟ ವತಿಯಿಂದ ಹಲವಾರು ಮದುವೆ ಮಾಡಿರುತ್ತೇನೆ ಆದರೆ ಎಷ್ಟು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಮದುವೆ ಮಡಿದಕ್ಕೆ ದೇಣಿಗೆ ಅಂತ ಪ್ರತಿ ಜೋಡಿ ಕಡೆಯಿಂದ ರೂ.500/- ಹಣ ಪಡೆದಿರುತ್ತೇವೆ ಮತ್ತು ಅದಕ್ಕೆ ಸಂಬಂಧಿಸಿದಂತೆ ರಶೀದಿಯನ್ನು ಅವರಿಗೆ ಕೊಟ್ಟಿರುತ್ತೇನೆ. ಎದುರುದಾರರು ನಮಗೆ ಮದುವೆಗಾಗಿ ರೂ.500/- ಹಣ ಕೊಟ್ಟಿದ್ದರು ಎಂದು ಹೇಳುತ್ತಾರೆ. ಸದ್ರಿ ಕಾರ್ಬನ್ ಕಾಪಿ ಇದೆಯೇ ಎಂಬ ಪ್ರಶ್ನೆಗೆ 10 ವರ್ಷಗಳಾಗಿದೆ ಅದು ಇದೆಯೋ ಇಲ್ಲವೋ ಶೋಧಿಸಬೇಕು ಎಂದು ಸಾಕ್ಷಿ ಹೇಳುತ್ತಾರೆ. ಕಾರ್ಬನ್ ಕಾಪಿ ನನ್ನ ಹತ್ತಿರ ಇಲ್ಲ ಎಂದು ಹೇಳುವ ಉದ್ದೇಶ ನಾನು ಅವರ ಮದುವೆ ಮಾಡಿಲ್ಲ ಆ ಕಾರಣಕ್ಕಾಗಿ ಇಲ್ಲ ಎಂದರೆ ಸರಿ ಅಲ್ಲ.

ಸದ್ರಿ ಅರ್ಜಿದಾರಳು ನಮ್ಮ ಹತ್ತಿರ ಬಂದು ಮದುವೆಯಾದ ಕುರಿತು ಪ್ರಮಾಣ ಪತ್ರ ಕೊಡಲು ವಿನಂತಿಸಿಕೊಂಡಿದ್ದರಿಂದ ನಿಪಿ-1 ದಾಖಲೆಯನ್ನು ಕೊಟ್ಟಿರುತ್ತೇನೆ ಎಂದರೆ ನಿಜ. ಸದ್ರಿ ನಿಪಿ-1 ದಾಖಲೆಯನ್ನು ಮದುವೆಯಾದ ಮಾರನೇ ದಿನವೇ ಎದುರುದಾರನು ಆ ದಾಖಲೆಯನ್ನು ತೆಗೆದುಕೊಂಡು ಹೋಗಿರುತ್ತಾನೆ. ಸದ್ರಿ ಎದುರುದಾರನು ಮೂಲ ದಾಖಲೆ ಹಿಂದುಗಡೆ ಸಹಿ ಮಾಡಿ ಆ ದಾಖಲೆಯನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ. ಆ ದಾಖಲೆಯ ಹಿಂದೆ ತೋರಿಸಲಾದ ಸಹಿ ಎದುರುದಾರನ ಸಹಿ ಅಲ್ಲ ಎಂದರೆ ಸರಿ ಅಲ್ಲ. ನಾನು ಅರ್ಜಿದಾರನ ವಿನಂತಿ ಮೇರೆಗೆ ನಿಪಿ-1 ದಾಖಲೆಯನ್ನು ಕೊಟ್ಟು ಅರ್ಜಿದಾರ ಮತ್ತು ಎದುರುದಾರರು ದಿನಾಂಕ 12-05-2016 ರಂದು ಮದುವೆ ಮಾಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದ್ರಿ ನಿಖಾನಾಮಾ ಓದಿಸಿದವರ ಹೆಸರು ನನಗೆ ಈಗ ಹೇಳಲು ಬರುವುದಿಲ್ಲ ಕಾರಣ 10 ವರ್ಷಗಳಾಗಿವೆ ಎಂದು ಹೇಳುತ್ತಾರೆ.

ಮದುವೆ ಆಗಿದೆ ಎಂದು ಹೇಳುವ ಸಮಯದಲ್ಲಿ ನಾನು ಹಾಜರಿದ್ದೆ. ಎದುರುದಾರನ ಪರವಾಗಿ ಸಾಕ್ಷಿದಾರರು ಯಾರು ಇದ್ದರು ಎಂದು ಹೇಳಲು ಬರುವುದಿಲ್ಲ. ಅದೇ ರೀತಿ ಅರ್ಜಿದಾರರ ಪರವಾಗಿ ಯಾರ ಸಾಕ್ಷಿದಾರರು ಇದ್ದರು ಎಂದು ಹೇಳಲು ಬರುವುದಿಲ್ಲ. ಮದುವೆಯಾಗಬೇಕಾದಲ್ಲಿ ವಧು ಮತ್ತು ವರನ ಕಡೆಯಿಂದ ಸಾಕ್ಷಿದಾರರು ಇರಬೇಕಾಗಿದ್ದು ಕಡ್ಡಾಯ ಎಂದರೆ ನಿಜ. ಸದ್ರಿ ಅರ್ಜಿದಾರ ಮತ್ತು ಎದುರುದಾರನ ಮಧ್ಯೆ ಯಾವುದೇ ವಿವಾಹ ಆಗದೇ ಇರುವ ಕಾರಣ ನನಗೆ ಗುರುಗಳು ಯಾರು ಇದ್ದರು ಎಂದು ಮತ್ತು ಸಾಕ್ಷಿದಾರರು

ಯಾರು ಇದ್ದರು ಎಂದು ಹೇಳಲು ಬರುತ್ತಿಲ್ಲ ಎಂದರೆ ಸರಿ ಅಲ್ಲ. ನಿಪಿ-1 ದಾಖಲೆ ಈ ಪ್ರಕರಣಕ್ಕೆ ಅನುಕೂಲಕ್ಕೋಸ್ಕರ ಸೃಷ್ಠಿ ಮಾಡಿದ ದಾಖಲೆ ಎಂದರೆ ಸರಿ ಅಲ್ಲ.

0

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.)**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರು.**

**ಸಾಕ್ಷಿದಾರರ ಸಹಿಃ**